(2) ತೆಂಗಿನ ಮರಗಳಿಗೆ ಕಪ್ಪುಹುಳು ರೋಗ ಹರಡಿರುವುದು.

ಶ್ರೀ ಎಲ್.ಆರ್. ಶಿವರಾಮೇಗೌಡ : ಅಧ್ಯಕ್ಷರೇ, ನಾವು ಹಳ್ಳಿ ಕಡೆ ಹೋಗುವಂತಿಲ್ಲ, ನಿನ್ನೆ ತೆಂಗಿನರೋಗದ ಬಗ್ಗೆ ಪ್ರಸ್ತಾಪಿಸಿದ್ದೆವು. ಈಗ ತೋಟಗಾರಿಕೆ ಸಚಿವರು ಇದ್ದಾರೆ.

ಶ್ರೀ ಎ. ಕೃಷ್ಣಪ್ಪ : 10ನೇ ತಾರೀಖು ಶ್ರೀ ವಾಟಾಳ್ ನಾಗರಾಜರು ಈ ಮನೆಯಲ್ಲಿ ತೆಂಗಿನ ಗಿಡಗಳಿಗೆ ಕಪ್ಪು ಹುಳು ಏನು ಬಿದ್ದಿದೆ ಅದರ ಬಗ್ಗೆ ಒಂದು ಸಮಿತಿಯನ್ನು ಕಳಿಸಿ ತುರ್ತಾಗಿ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದರು. ಆ ಸಮಿತಿ ನಾಳೆ ಬೆಳಿಗ್ಗೆ 8 ಗಂಟೆಗೆ ಪ್ರವಾಸ ಹೊರಡುತ್ತದೆ. ಮೊದಲು ಅವರು ಚಾಮರಾಜನಗರ, ನಾಗಮಂಗಲ, ಚಿಕ್ಕಮಗಳೂರು ಶಿವಮೊಗ್ಗ ಜಿಲ್ಲೆಗಳಿಗೆ ಹೋಗುತ್ತಿದ್ದಾರೆ. ಎಚ್ಆರ್ ರೆಡ್ಡಿ ಪ್ರಾಧ್ಯಾಪಕರು, ಕೃಷಿ ಕಾಲೇಜ್, ಮೆನ್ಸೊಂಬಾ ಅಧ್ಯಾಪಕರು, ಜಿಕೆವಿಕೆ, ಡಾ: ರಾಜಗೋಪಾಲ್, ಡಿಆರ್, ಪ್ರಾಧ್ಯಾಪಕರು ಕೀಟಶಾಸ್ತ್ರ ಉದಯಕುಮಾರ್ ಪ್ರಾಧ್ಯಾಪಕರು, ಜಿಕೆವಿಕೆ, ಸಿದ್ಧರಾಮೇಗೌಡರು - ಈ ತಂಡ ನಾಳೆ 8 ಗಂಟೆಗೆ ಹೋಗುತ್ತಿದೆ. ಅವರ ವರದಿ ಬಂದ ತಕ್ಷಣ ಕೀಟನಾಶಕದ ವಿಚಾರದಲ್ಲಿ ಏನೇನು ಅಗತ್ಯ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಸರ್ಕಾರ ತೆಗೆದುಕೊಳ್ಳುತ್ತದೆ ಎಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ : ಅಧ್ಯಕ್ಷರೇ, ಒಂದು ಪ್ರೊಟೊಕಾಲ್ ವಿಷಯ. ಮುಖ್ಯಮಂತ್ರಿಗಳು 20ನೇ ತಾರೀಖು ನನ್ನ ಕ್ಷೇತ್ರಕ್ಕೆ ಬರುತ್ತಿದ್ದಾರೆ.

(ಗದ್ದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅವರಿಗೆ ಔಷಧಿಗೆ ಹಣ ಕೊಟ್ಟರೆ ಸಾಕು.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಔಷಧಿಗೆ ಹಣ ಕೊಟ್ಟರೆ ಸಾಕು.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಸಿಂಧ್ಯರವರು ಔಷಧಿಗೆ ಹಣ ಕೊಟ್ಟರೆ ಸಾಕೆಂದು ಹೇಳುತ್ತಿದ್ದಾರೆ. ಹಣದ ಕೊರತೆ ಯಾವುದಾದರೂ ಕ್ಷೇತ್ರದಲ್ಲಿದ್ದರೆ ಹೇಳಿ ನಾನು ತುರ್ತಾಗಿ ಕ್ರಮ ತೆಗೆದುಕೊಳ್ಳುತ್ತೇನೆ. ಹಣ ಕೊಟ್ಟಿದ್ದೇವೆ.

ಅಧ್ಯಕ್ಷರು : ನಿನ್ನೆಯಿಂದ ಅವರು ಪ್ರತಿಪಾದನೆ ಮಾಡುತ್ತಿದ್ದಾರೆ. ತಕ್ಷಣ ಔಷಧಿಯನ್ನು ಬಿಡುಗಡೆ ಮಾಡಿ ರೋಗ ನಿವಾರಣೆ ಮಾಡಿ ಎಂದು ಕೇಳುತ್ತಿದ್ದಾರೆ. ಅದಕ್ಕೇನು ಕ್ರಮ ತೆಗೆದುಕೊಂಡಿದ್ದೀರಿ ಅದನ್ನು ಹೇಳಿ.

ಶ್ರೀ ಎ. ಕೃಷ್ಣಪ್ಪ : ಆಗಲೇ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಔಷಧಿಯಿಂದ ಪ್ರಯೋಜನವಾಗುತ್ತಿಲ್ಲ.

ಶ್ರೀ ಎ. ಕೃಷ್ಣಪ್ಪ : ಒಬ್ಬರು ಔಷಧಿಯತ್ತ ಪ್ರಯೋಜನವಿಲ್ಲವೆಂದು ಹೇಳುತ್ತಾರೆ, ಮತ್ತೊಬ್ಬರು ಹುಳದಿಂದ ಪ್ರಯೋಜನವಿಲ್ಲವೆನ್ನುತ್ತಾರೆ, ಮತ್ತೊಬ್ಬರು ಟೀಮ್ ಕಳಿಸಿ ಎಂದು ಹೇಳುತ್ತಾರೆ.

(3) ಸರಕಾರಿ ಕಾರ್ಯಕ್ರಮಗಳಲ್ಲಿ ಶಾಸಕರುಗಳಿಗೆ ಪ್ರಾಧ್ಯಾನ್ಯತೆ.

ಶ್ರೀ ಎಂ. ನಾರಾಯಣಸ್ವಾಮಿ : 21 ರಂದು ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಜಿಲ್ಲೆಗೆ ಭೇಟಿ ಕೊಡುತ್ತಿದ್ದಾರೆ. ಅಲ್ಲಿ ಮುಜರಾಯಿ ಇಲಾಖೆಯವರು ಮತ್ತು ಆಂಧ್ರದವರು ಇಬ್ಬರೂ ಸೇರಿಕೊಂಡು ಒಂದು ಚೌಲ್ಟ್ರಿ ಕಟ್ಟಿಸಿದ್ದಾರೆ. ಇದಕ್ಕೆ

ಎನ್.ಟಿ.ಆರ್. ಅವರ ಸರಕಾರ ಕೂಡ ಹಣ ಬಿಡುಗಡೆ ಮಾಡಿತ್ತು. ಆದರೆ ಆ ಸ್ಪೋನ್‌ನಲ್ಲಿ ನನ್ನ ಹೆಸರು ಇಲ್ಲ, ಅಲ್ಲಿ ಪ್ರೊಟೋಕಾಲ್ ಮೈನ್‌ಟೇನ್ ಮಾಡಲಿಲ್ಲ. ಅದನ್ನು ನಾನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತಂದೆ. 3 ರೀತಿ ಕಾರ್ಡ್ ಪ್ರಿಂಟಾಗಿದೆ. ನನಗೆ ಅವಮಾನ ಮಾಡುತ್ತಿದ್ದಾರೆ. ಪ್ರೊಟೋಕಾಲ್ ಏನು ಇದೆ ಅದರಲ್ಲಿ ಸಮಿತಿ ಎನು ಇದೆ ಅದಕ್ಕೆ ತಾವು ಆದೇಶ ಕೊಡಬೇಕು.

ಶ್ರೀ ಸಿ. ಬೈರೇಗೌಡ : ಬಹಳ ಸಾರಿ ಇಲ್ಲಿ ಈ ರೀತಿಯ ವಿಷಯಗಳು ಪ್ರಸ್ತಾಪವಾಗಿದೆ.

ಅಧ್ಯಕ್ಷರು : ಸಭೆ ಸಮಾರಂಭಗಳಲ್ಲಿ ಶಾಸಕರಿಗೇನು ಗೌರವ ಕೊಡಬೇಕು ಆ ಗೌರವ ಕೊಡುವುದಕ್ಕೆ ತಾವು ವಿರ್ಪಾಡು ಮಾಡಿ. ನಾನು ಅವರಿಗೆ ಆದೇಶ ಕೊಟ್ಟಿದ್ದೇನೆ. ಶಾಸಕರಿಗೆ ಯಾವ ಗೌರವ ಸಿಗಬೇಕು ಯಾವ ಸ್ಥಾನ ಸಿಗಬೇಕು ಅದನ್ನು ಕೊಡುವ ವಿರ್ಪಾಡು ಮಾಡಿ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಅದು ಸರಕಾರ ಹೊರಡಿಸಿದ ನಿಯಮದಲ್ಲೇ ಇದೆ. ಸರಕಾರಿ ಕಾರ್ಯಕ್ರಮಗಳಲ್ಲಿ ಶಾಸಕರಿಗೆ ಪ್ರಾಧಾನ್ಯತೆ ಕೊಡಬೇಕೆಂದಿದೆ ಅದನ್ನು ಆದರಂತೆ ಕೊಡುತ್ತೇವೆ.

ಶಾಸನ ರಚನಾ ಕಾರ್ಯಕಲಾಪಗಳು.

(1) ಕರ್ನಾಟಕ ರೇಷ್ಮೆ ಹುಳುತಳಿ, ರೇಷ್ಮೆ ಗೂಡು ಮತ್ತು ರೇಷ್ಮೆ ನೂಲು (ಉತ್ಪಾದನಾ ಸರಬರಾಜು, ಹಂಚಿಕೆ ಮತ್ತು ಮಾರಾಟದ ನಿಯಂತ್ರಣ (ತಿದ್ದುಪಡಿ) ವಿಧೇಯಕ, 1994.

ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : (ಮಾನ್ಯ ರೇಷ್ಮೆ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 1994ರ ಕರ್ನಾಟಕ ರೇಷ್ಮೆ ಹುಳ ತಳಿ, ರೇಷ್ಮೆ ಗೂಡು ಮತ್ತು ರೇಷ್ಮೆ ನೂಲು ಉತ್ಪಾದನೆ ಸರಬರಾಜು, ಹಂಚಿಕೆ ಮತ್ತು ಮಾರಾಟದ ನಿಯಂತ್ರಣ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವನೇನೆಂದರೆ, "1994ರ ಕರ್ನಾಟಕ ರೇಷ್ಮೆ ಹುಳ ತಳಿ, ರೇಷ್ಮೆ ಗೂಡು ಮತ್ತು ರೇಷ್ಮೆ ನೂಲು ಉತ್ಪಾದನೆ ಸರಬರಾಜು, ಹಂಚಿಕೆ ಮತ್ತು ಮಾರಾಟದ ನಿಯಂತ್ರಣ (ತಿದ್ದುಪಡಿ) ವಿಧೇಯಕ"ವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : (ಮಾನ್ಯ ರೇಷ್ಮೆ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 1994ರ ಕರ್ನಾಟಕ ರೇಷ್ಮೆ ಹುಳ ತಳಿ, ರೇಷ್ಮೆ ಗೂಡು ಮತ್ತು ರೇಷ್ಮೆ ನೂಲು ಉತ್ಪಾದನೆ ಸರಬರಾಜು, ಹಂಚಿಕೆ ಮತ್ತು ಮಾರಾಟದ ನಿಯಂತ್ರಣ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.